## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಕ್ರಿ. ಮಿ. ನಂ.215/2021

ಪಿಡಬ್ಲ್ಯೂ-1

| | | |
|---|---|---|
| ಹೆಸರು | - | ಶ್ರೀಮತಿ ಪಲ್ಲವಿ |
| ಗಂಡನ ಹೆಸರು | - | ವಿವೇಕ ಕಾರಂಜೆ |
| ವಯಸ್ಸು | - | 32 ವರ್ಷ |
| ಉದ್ಯೋಗ | - | ಮನೆ ಕೆಲಸ |
| ವಾಸ ಸ್ಥಳ | - | ಸೇಡಂ |

ದಿನಾಂಕ 05-08-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಎಸ್. ಪಿ. ಅರ್ಜಿದಾರ ಪರ ವಕೀಲರಿಂದ**

1 ನೇ ಎದುರುದಾರರು ನನ್ನ ಗಂಡ ಇರುತ್ತಾರೆ. ಎದುರುದಾರ 2 ಮತ್ತು 3 ನನ್ನ ಗಂಡನ ತಂದೆ-ತಾಯಿ ಇರುತ್ತಾರೆ. 4 ಮತ್ತು 5 ನೇ ಎದುರುದಾರರು ನನ್ನ ನಾದಿನಿಯರು, 6 ನೇ ಎದುರುದಾರರು ನನ್ನ ಅತ್ತೆಯ ತಂಗಿಯ ಮಗಳು ಇರುತ್ತಾರೆ. ನನ್ನ ಮತ್ತು 1 ನೇ ಎದುರುದಾರರ ವಿವಾಹ ದಿನಾಂಕ 12.02.2020 ರಂದು ಕಲಬುರಗಿಯ ವೀರಶೈವ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ಮದುವೆಯ ಕಾಲಕ್ಕೆ ನನ್ನ ತಾಯಿ ಉಡುಗೊರೆ ಅಂತಾ 40 ತೊಲೆ ಬಂಗಾರ, 5 ಕೆ.ಜಿ. ಬೆಳ್ಳಿ ಹಾಗೂ 38 ರಿಂದ 40 ಲಕ್ಷ ರೂಪಾಯಿ ವೆಚ್ಚ ಮಾಡಿ ಮದುವೆ ಮಾಡಿರುತ್ತಾರೆ. ಮದುವೆಯಾದ ನಂತರ ನಾನು ಬಾಳ್ವೆ ಮಾಡಲು 1 ನೇ ಎದುರುದಾರರ ಸ್ವಂತ ಊರಾದ ಕಲಬುರಗಿಗೆ ಹೋಗಿರುತ್ತೇನೆ. ಅಲ್ಲಿ ಎದುರುದಾರ ನಂ.2 ರಿಂದ 6 ಸಹ ವಾಸ ಇದ್ದರು. ಎರಡು ತಿಂಗಳ ನಂತರದಲ್ಲಿ ಎದುರುದಾರರು ನನಗೆ 40 ಲಕ್ಷ ರೂಪಾಯಿ ಹಣ ತರುವಂತೆ ಒತ್ತಾಯ ಮಾಡಲು ಪ್ರಾರಂಭಿಸಿರುತ್ತಾರೆ. ನನಗೆ ಎದುರುದಾರ ನಂ.2 ರಿಂದ 6 ಇವರು ನನ್ನ ಗಂಡನಿಗೆ ವಯಸ್ಸಾಗಿರುತ್ತದೆ ಬುದ್ದಿ ಇಲ್ಲ, ನೀನು ನಮ್ಮ ಮಾತು ಮಾತ್ರ ಕೇಳಬೇಕು ಅಂತಾ ಅನ್ನುತ್ತಿದ್ದರು. ಅವರು ನನ್ನ ಗಂಡನಿಗೆ ಯಾವುದೋ ಒಂದು ಮಾತ್ರೆ ಕೊಡುತ್ತಿದ್ದು, ಆಗ ಅವರು ಪ್ರಜ್ಞೆ ತಪ್ಪಿ ಮೂರ್ಛೆ ಹೋಗುತ್ತಿದ್ದರು. ಆಗ ನಾನು ನನ್ನ ಗಂಡನನ್ನು ಪ್ರಶ್ನಿಸಲು ಆತ ನೀನು ಅದನ್ನು ಕೇಳಬಾರದು ನನ್ನ ತಾಯಿ ಏನು ಮಾತ್ರೆ ಕೊಡುತ್ತಾರೆ ಅದನ್ನು ನಾನು ತೆಗೆದುಕೊಳ್ಳುತ್ತೇನೆ ಅಂತಾ ಅಂದಿರುತ್ತಾರೆ. ನಾನು ನನ್ನ ಅತ್ತೆಯನ್ನು ಈ ಕುರಿತು ವಿಚಾರಿಸಿದಾಗ ಅವಳು ನನಗೆ ಬೈದು, ನನ್ನ ಮೇಲೆ ಹಲ್ಲೆ ಮಾಡಿರುತ್ತಾಳೆ ಮತ್ತು ಮಾನಸಿಕ ಹಿಂಸೆ ಕೊಟ್ಟಿರುತ್ತಾಳೆ. ನನ್ನ ಅತ್ತೆ ನನಗೆ ಹಣ ತರದಿದ್ದರೇ ನನ್ನ ವಿರುದ್ಧ ಪೊಲೀಸ್ ಠಾಣೆಗೆ ಇಲ್ಲದು-ಸಲ್ಲದು ಹೇಳಿ ದೂರು ನೀಡುತ್ತೇನೆ ಅಂತಾ ಅಂದಿರುತ್ತಾರೆ. ನನಗೆ ಎದುರುದಾರರು ನೀನು ಮನೆ ಬಿಟ್ಟು ಹೋಗು ಇಲ್ಲದಿದ್ದರೇ ನಿನ್ನನ್ನು ಸಾಯಿಸಿ ಬಿಡುತ್ತೇವೆ ಅಂತಾ ದಿನಾಲೂ ಕಿರುಕುಳ ನೀಡುತ್ತಿದ್ದರು. ನನಗೆ ಮಾಸಿಕ ರುತುಸ್ರಾವ ಆದಾಗ ಹೆಚ್ಚಿಗೆ ಕೆಲಸ ನೀಡಿ ನನಗೆ

ತೊಂದರೆಯಾಗುತ್ತದೆ ಅಂತಾ ಹೇಳಿದರು ಅವರು ಕೇಳದೆ ಹೆಚ್ಚಿಗೆ ಕೆಲಸ ಮಾಡಿಸುತ್ತಿದ್ದರು ಮತ್ತು ಕಿರುಕುಳ ನೀಡುತ್ತಿದ್ದರು. ನನ್ನ ಅತ್ತೆ ನನಗೆ ಮಾತ್ರೆ ನೀಡುವುದಾಗಿ ಮತ್ತು ದಿನಾಲೂ ಮುರ್ಛೆ ಬಂದು ಡಿಪ್ರೇಷನಗೆ ಹೋಗುವಂತೆ ಮಾಡುವುದಾಗಿ ದಮಕಿ ಹಾಕಿರುತ್ತಾಳೆ.

ದಿನಾಂಕ 30.07.2020 ರಂದು ನನ್ನ ಗಂಡ ನನ್ನೊಂದಿಗೆ ಜಗಳ ಮಾಡಿ ಒತ್ತಾಯಪೂರ್ವಕವಾಗಿ ಒಂದು ಹಾಳೆಯ ಮೇಲೆ ಸಹಿ ಪಡೆದುಕೊಂಡು ಅದರಲ್ಲಿ ತಾನೇ ನಾನು ಪಲ್ಲವಿ ವಿವೇಕ ಕರಂಜೆ ನಾನು ಇನ್ನು ಮುಂದೆ ಸಾಯುತ್ತಿನಿ ಅಂತಾ ಹೆದರಿಸಲ್ಲ ನಿಮಗೆ ಇನ್ನು ಮೇಲೆ ನಿಮ್ಮ ಜೊತೆ ಖುಷಿಯಾಗಿ ಇರುತ್ತೇನೆ ಅಂತಾ ಬರೆದು ಸಹಿ ಪಡೆದುಕೊಂಡಿರುತ್ತಾನೆ. ನಂತರದಲ್ಲಿ ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ ನನ್ನ ಗಂಡ ನಾನು ಸ್ನಾನ ಮಾಡುವುದನ್ನು ವಿಡಿಯೋ ಮಾಡಿಕೊಂಡಿರುವುದಾಗಿ ಒಂದು ಹಾಳೆಯ ಮೇಲೆ ಸಹಿ ಮಾಡು ಇಲ್ಲದಿದ್ದರೇ ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ ಹೇಳಿ ನನ್ನ ಸಹಿ ಪಡೆದುಕೊಂಡಿರುತ್ತಾನೆ. ಎದುರುದಾರ ನಂ.4 ಮತ್ತು 5 ಇವರು 1 ನೇ ಎದುರುದಾರ ಹುಚ್ಚ ಇದ್ದು, ಅವನೊಂದಿಗೆ ಏಕೆ ಬಾಳ್ವೆ ಮಾಡುವೆ ಅಂತಾ ಅನ್ನುತ್ತಿದ್ದರು ಮತ್ತು ನನ್ನ ಮೊಬೈಲ ಪೋನ ತೆಗೆದುಕೊಂಡು ನಮ್ಮ ತಂದೆ-ತಾಯಿ ಪೋನ ಮಾಡಿದಾಗ ಅದರ ಸ್ವೀಕರ ಆನ ಮಾಡಿ ಮಾತನಾಡು ಅಂತಾ ಅನ್ನುತ್ತಿದ್ದರು. ಅವರು ನನ್ನ ಮಲಗುವ ಕೋಣೆಯ ಬಾಗಿಲು ತೆಗೆದೆ ಇರಬೇಕು, ನೀನು 1 ನೇ ಎದುರುದಾರನೊಂದಿಗೆ ಮಲಗಬಾರದು ಎಂದು ಅನ್ನುತ್ತಿದ್ದರು. ನಾನು ಸದರಿ ವಿಷಯವನ್ನು 3 ನೇ ಎದುರುದಾರನಿಗೆ ಹೇಳಿದಾಗ ಅವನು ನೀನು ಎದುರುದಾರ ನಂ.4 ಮತ್ತು 5 ಇವರ ಮಾತು ಕೇಳಬೇಕು ಇಲ್ಲಿ ಅವರದೇ ಮಾತು ನಡೆಯುತ್ತದೆ ಅಂತಾ ಅನ್ನುತ್ತಿದ್ದರು. ನನಗೆ ನಂತರದಲ್ಲಿ ಮೈಯಲ್ಲಿ ಹುಷಾರ ಇಲ್ಲದೇ ಇದಿದ್ದರಿಂದ ನನ್ನ ತಾಯಿ ನನ್ನನ್ನು ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಆಗ ವೈದ್ಯರು ನನ್ನ ಪರೀಕ್ಷೆ ಮಾಡಿದಾಗ ನನಗೆ ಲೋ ಬಿ.ಪಿ. ಮತ್ತು ಲೋ ಹೇಮೊಗ್ಲೋಬಿನ ಇರುವುದಾಗಿ ಮತ್ತು ಆರಾಮ ಪಡೆಯುವಂತೆ ಸೂಚಿಸಿರುತ್ತಾರೆ. ನಂತರ ದಿನಾಂಕ 06.10.2020 ರಂದು ಎದುರುದಾರರ ಮನೆಗೆ ಹೋಗಿದ್ದು ಆಗ ಅವರು ನನ್ನನ್ನು ಮನೆಯ ಗೇಟ ಹತ್ತಿರ ನಿಲ್ಲಿಸಿದ್ದು ಎದುರುದಾರ ನಂ.4 ಮತ್ತು 5 ಇವರು ನನ್ನನ್ನು ಮನೆಗೆ ಬಿಟ್ಟುಕೊಂಡಿಲ್ಲ. ನಂತರ ಅವರು ನನ್ನ ಮೈ ಮೇಲಿನ ಬಂಗಾರ ತೆಗೆದುಕೊಂಡು ನನ್ನನ್ನು ಅಲ್ಲಿಯೇ ಇಟ್ಟುಕೊಂಡಿರುತ್ತಾರೆ. ದಿನಾಂಕ 29.10.2020 ರಂದು ನಾವು ಎದುರುದಾರರ ಮನೆಗೆ ಹೋಗಿದ್ದು, ಅವರು ಮನೆಯ ಬಾಗಿಲು ತೆಗೆದಿರುವುದಿಲ್ಲ. ಆದರೆ ಅವರು ನಮ್ಮೊಂದಿಗೆ ಮಾತನಾಡಿಲ್ಲ ಏಕೆ, ಎಂತ ಎಂದು ಕೇಳಿಲ್ಲ. ನಂತರ ದಿನಾಂಕ 02.11.2020 ರಂದು ಎದುರುದಾರರ ವಿರುದ್ದ ಮಹಿಳಾ ಪೊಲೀಸ್ ಠಾಣೆ ಕಲಬುರಗಿ ಇಲ್ಲಿ ದೂರು ಸಲ್ಲಿಸಿರುತ್ತೇನೆ.

ನನ್ನ ಗಂಡ PDA ಇಂಜಿನಿಯರಿಂಗ್ ಕಾಲೇಜ ಕಲಬುರಗಿ ಇಲ್ಲಿ ಲ್ಯಾಬ ಟೆಕ್ನಿಷಿಯನ್ ಇರುತ್ತಾರೆ.

ಅಲ್ಲಿ ಅವರದು ಖಾಯಂ ನೌಕರಿ ಇರುತ್ತದೆ. ನನ್ನ ಗಂಡನ ಕುಟುಂಬಕ್ಕೆ 60 ರಿಂದ 80 ಎಕರೆ ಜಮೀನು ಇರುತ್ತವೆ. ಅವರದು ಒಂದು ಮನೆ ಇರುತ್ತದೆ. ಅದು ಮೂರು ಅಂತಸ್ತಿನದು ಇರುತ್ತದೆ. ಮನೆಯ ಉತಾರೆಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ–1 ಎಂದು, ಬಾಳೂರು ಗ್ರಾಮದ ಸರ್ವೇ ನಂ.26/1, ಚಂದಾಪುರ ಗ್ರಾಮದ ಸರ್ವೇ ನಂ.27/1, ಬಾಳೂರು ಗ್ರಾಮದ ಸರ್ವೇ ನಂ.27/1, 146/1, 146/3, 146/1, 4/2 ಇವುಗಳ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ, ಅವುಗಳನ್ನು ನಿಪಿ–2 ರಿಂದ 7 ಎಂದು, ಸೇಡಂ ಪೊಲೀಸ್ ಠಾಣೆಯ ಗುನ್ನೆ ಸಂ.117/2021 ಹಾಗೂ ದೂರಿನ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ, ಅವುಗಳನ್ನು ನಿಪಿ–8 ಮತ್ತು 9 ಎಂದು, ದೋಷಾರೋಪಣೆ ಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ– 10 ಎಂದು, ಗುನ್ನಾ ಸ್ಥಳದ ಪಂಚನಾಮೆ ಮತ್ತು ಜಪ್ತಿ ಪಂಚನಾಮೆಯ ದೃಡಿಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ– 11 ಮತ್ತು 12 ಎಂದು ಗುರುತಿಸಲಾಯಿತು. ನಾನು ಈಗ ಸೇಡಂದಲ್ಲಿ ತಾಯಿಯ ಜೊತೆ ಬಾಡಿಗೆ ಮನೆ ಮಾಡಿ ವಾಸ ಮಾಡುತ್ತಿದ್ದೇನೆ. ನನಗೆ ಪ್ರತಿ ತಿಂಗಳು 35 ಸಾವಿರ ಜೀವನಾಂಶದ ಅವಶ್ಯಕತೆ ಇರುತ್ತದೆ. ನನಗೆ ಗಂಡನ ಮನೆಯಲ್ಲಿ ಒಂದು ಪ್ರತ್ಯೇಕ ವಾಸದ ಮನೆಯನ್ನು ಕೊಡಿಸಬೇಕು.

ಆದ್ದರಿಂದ ನಾನು ಕೋರಲಾದಂತೆ ಅರ್ಜಿಯನ್ನು ಮಂಜೂರು ಮಾಡಲು ಪ್ರಾರ್ಥಿಸುತ್ತೇನೆ.

**(ಎದುರುದಾರರು ಗೈರು ಹಾಜರಿದ್ದು, ಯಾವುದೇ ಪ್ರತಿನಿಧಿತ್ವ ಇರುವುದಿಲ್ಲ, ಆದ್ದರಿಂದ ಪಾಟೀ ಸವಾಲಿಗೆ ಅಂತಿಮ ಮುದ್ದತ್ತು ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾದಂ.ಸೇಡಂ.

*SYH